

**ಅಜಯ್ ಅಂಗಡಿ**

ಕಲೆ: ಎಸ್.ಎಸ್. ಕಾಖಂಡಕಿ

# ಬೆಳಕನೀವ ಕಂದೀಲಿನಂತೆ

ನಡುರಾತ್ರಿಯ ನೀರವ ಮೌನದ ಬಾನು;
ಸಣ್ಣಗೆ ಹೊತ್ತಿದೆ ಕನಸಿನ ಹಣತೆ,
ಹಣತೆಯ ಬೆಳಕಲ್ಲಿ ಮೂಡಿದ
ಬೆಚ್ಚನೆಯ ಬಿಸಿ ಕವಿತೆ. ಬಿಸಿ ಆರುವ ಮುನ್ನ
ಊರೆಲ್ಲ ಸುತ್ತಿ ಬಂದಂತೆ ತಣ್ಣಗೆ ಕರಗುತ್ತದೆ.

ಊರ ದಾರಿಗಳಲ್ಲಿ ನೆನಪುಗಳ ಬಳ್ಳಿ
ಹಬ್ಬಿದ್ದು ಕಂಡದ್ದೇ ಈಗ. ಅರೆ! ಇಷ್ಟು ದಿನ
ಈ ನೆನಪುಗಳು ಎಲ್ಲಿ ಮರೆಯಾಗಿದ್ದವು?
ಎಂದೋ ಚಿಗುರಿದ್ದ ಆ ನೆನಪುಗಳ ಹಾದಿಯಲ್ಲಿ
ನಾನೀಗಲೇ ನಡೆಯುತ್ತಿರುವುದು ನೋಡಿ.
ನೆನಪುಗಳು ಹಾಗೆಯೇ....
ತಡವಾಗಿ ನೆನಪಾಗುತ್ತವೆ,
ಮತ್ತೆ ಮತ್ತೆ ಕಾಡುತ್ತವೆ.

ಆ ಸಂಜೆಯ ಮಳೆ ಮತ್ತು ಅವಳು
ಮರೆಯದ ಬದುಕಿನ ಸುಂದರ ಪುಟಗಳು.
ಕಣ್ ನೋಟದಲ್ಲೇ ಏನೆಲ್ಲವನ್ನೂ
ಹೇಳಿಬಿಡುವ ಅವಳ ದಿಟ್ಟತೆಗೆ
ಸೋತದ್ದು ನಾನೋ? ಸೋಲಿಸಿದ್ದು ಅವಳೋ?
ಸುಲಭದಲ್ಲಿ ತಿಳಿಯುವುದು ಸಾಧ್ಯವಿಲ್ಲ.



ಬೇಸಿಗೆಯ ಧಗೆಗೆ ಬಿರುಕು ಬಿಟ್ಟ
ನೆಲಕ್ಕೇನೆ ಮಳೆ ತಂಪೆರೆವುದು.
ಆ ನೆಲದಿಂದಲೇ ಸಸಿ ಚಿಗುರಿ
ಹಸಿರೆಲೆಯ ಬಿಡುವುದು, ಹೂ ನೀಡುವುದು.
ಸೋತ ಮನವೇ ಗೆಲುವಿನ ಮುಗುಳ್ನಗೆ
ಬೀರುವುದು, ಬಿದ್ದದ್ದೇ ಪುಟಿದೇಳುವುದು.
ಋತುಗಳು ಬದಲಾದಂತೆ ಬದುಕಿನ
ತಿರುವು ಕೂಡ.

ಏಕಾಂತದ ಪಯಣದಲಿ ಒಂಟಿತನ
ಕಾಡುವುದಿಲ್ಲ. ಕಾಣಿಸುವುದಿಲ್ಲ ಸಹ.
ಪಯಣದಲ್ಲಿ ತಿರುವುಗಳೇ ಹೇಳುತ್ತವೆ
ಕತೆ, ಕವಿತೆ ಇತ್ಯಾದಿಗಳನ್ನು.
ಕತೆಗಳು ಸುಖಾಂತ್ಯ ಮಾತ್ರ ಕಂಡದ್ದು
ಕಡಿಮೆಯೇ ಈ ಪಯಣದ ಹಾದಿಯಲ್ಲಿ.

ಒಂದೇ ರಸ್ತೆಯಲ್ಲಿ ನಡೆದರೂ ಕೂಡ
ಎಲ್ಲರ ಗಮ್ಯವೂ ಒಂದೇ ಆಗದಲ್ಲ!
ಕೆಲವರಿಗೆ ಗಮ್ಯವೇ ಇಲ್ಲ,
ಇದ್ದರೂ ಸಂಯಮವಿಲ್ಲ ತಲುಪಲು.
ಕಾರಣವೇನು? ರಸ್ತೆಯ ಕಾಮಗಾರಿಯದ್ದೋ
ಅಥವಾ ನಡೆಯಲಾಗದೆ ಬಿದ್ದವರದ್ದೋ?
ಅವರವರ ಮನಸ್ಥಿತಿಯದು.

ಇದೆಲ್ಲವೂ ಬದುಕಿನ ಯಾವುದೋ
ತಿರುವಿನ ಬಿಂದುವಿನಲ್ಲಿ ಘಟಿಸುತ್ತದೆ.
ಆ ಘಟಿಸುವಿಕೆಯಲ್ಲಿ ಇರಬಹುದು
ಇವುಗಳಲ್ಲೊಂದು ಅಥವಾ ಇಂಥದ್ದೊಂದು.
ಕಾಯಬೇಕಷ್ಟೆ, ಆ ಒಂದು ಘಳಿಗೆಗಾಗಿ.

ಬದಲಾವಣೆಯ ಆ ಘಳಿಗೆ ಹೊಸ
ಋತುವಿನ ಆಗಮನದಂತೆ.
ಅರ್ಧ ಬರೆದ ಕವಿತೆಯ ಮುಂದಿನ
ಸಾಲೊಂದು ಹೊಳೆದಂತೆ;
ಮತ್ತದು ಬೆಳಕನೀವ ಕಂದೀಲಿನಂತೆ.